ಆಗಿದ್ದಾರೆ. Administration has totally collapsed. Police modernization ಗೆ ಕೇಂದ್ರದಿಂದ ಬಂದ ದುಡ್ಡು ಖರ್ಚು ಮಾಡಿದ್ದೀರಾ? ಕೇಂದ್ರ ಸರ್ಕಾರದ ಹೋದ ವರ್ಷದ ಬಜೆಟ್‌ನಲ್ಲಿ ನಿಮಗೆ ಆಯುಷ್ ಎಂಬ ಒಂದು ಆಯುರ್ವೇದ ಆಸ್ಪತ್ರೆ ಮಾಡಲಿಕ್ಕೆ 10 ಕೋಟಿ ರೂ. ಕೊಟ್ಟರು. ಪ್ರೈವೇಟ್‌ನವರು ಯಾರೋ ಬಂದಿದ್ದಾರೆಂದು ಅದು ಬೇಡವೆಂದು ನೀವು ಬರೆದಿದ್ದೀರಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

PPPಯಲ್ಲಿ ಮಾಡಿ ಎಂದು ಹೇಳಿದರು. ಹೋದ ಬಜೆಟ್‌ನಲ್ಲಿ ನೀವು ಅನೌನ್ಸ್ ಮಾಡಿದಿರಿ. 10 ಕೋಟಿ ರೂ. ಕೇಂದ್ರ ಸರ್ಕಾರದಿಂದ ಬಂದಿದೆ, ನಾವು ಒಂದು CDPಯಲ್ಲಿ ಒಂದು ಒಳ್ಳೆಯ ಆಯುರ್ವೇದ ಆಸ್ಪತ್ರೆ ಕಟ್ಟುತ್ತೇವೆಂದು ಹೇಳಿದವರು ಈಗ ಇದ್ದಕ್ಕಿದ್ದ ಹಾಗೆ ನಮಗೆ 10 ಕೋಟಿ ರೂ. ಬೇಡವೆಂದು ಬರೆದಿದ್ದೀರಿ. ನಿಮಗೆ ಇದು ಬೇಕಾಗಿಲ್ಲವಾ? ಯಾರೋ ಪ್ರೈವೇಟ್‌ನವರು ಮಾಡುತ್ತಾರೆಂದು ಅವರ influence ಗೆ ಒಳಗಾಗಿದ್ದೀರಾ? Government of Indiaದವರು ಕೊಟ್ಟಿರುವುದು. This is the attitude of this Government. ಮಾನ್ಯ ಅಧ್ಯಕ್ಷರೆ, ನನಗೆ ನೀವು ಇಷ್ಟು ಸಮಯ ಕೊಟ್ಟಿರಿ, ಅದಕ್ಕೋಸ್ಕರ ನಾವು ನಿಮಗೂ ಕೂಡ ಧನ್ಯವಾದಗಳನ್ನು ಹೇಳಿ, ಎಲ್ಲಾ ಮಾನ್ಯ ಸದಸ್ಯರುಗಳಿಗೂ ಧನ್ಯವಾದಗಳನ್ನು ಹೇಳಿ, general discussion ಮೇಲೆ ನಾನು ಇನ್ನೂ ಬಹಳಷ್ಟು ಹೇಳುವುದು ಇತ್ತು. ಇಷ್ಟಕ್ಕೇ ಮುಗಿಸುತ್ತೇನೆ. ವಂದನೆಗಳು

5. ಗಮನ ಸೆಳೆಯುವ ಸೂಚನೆ

ಅ) ವಿಷಯ: ಉಳ್ಳಾಲ ಪಟ್ಟಣದಲ್ಲಿ ಕೆ.ಯು.ಐ.ಡಿ.ಸಿ.ಯಿಂದ ಕುಡಿಯುವ ನೀರಿನ ಯೋಜನೆ ಕಾಮಗಾರಿ ಕಳಪೆಯಾಗಿರುವುದು

ಶ್ರೀ ಯು.ಟಿ. ಖಾದರ್ (ಉಳ್ಳಾಲ): ಮಾನ್ಯ ಅಧ್ಯಕ್ಷರೆ, ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತುಂಬೆ ನದಿಯಿಂದ ಉಲ್ಲಾಳ ಪುರಸಭೆ ವ್ಯಾಪ್ತಿಯ ಪ್ರದೇಶಗಳಿಗೆ ಸರ್ಕಾರವು ಕೆ.ಯು.ಐ.ಡಿ.ಸಿ. ಯೋಜನೆಯಡಿ ಅಳವಡಿಸಿರುವ ನೀರಿನ ಪೈಪುಗಳಿಂದ ನೀರು ಸೋರುತ್ತಿದ್ದು ಕಳಪೆ ಕಾಮಗಾರಿ ಬಗ್ಗೆ ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು

ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) (ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ) ಈ ಹೇಳಿಕೆ ನೀಡಲು ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಉಳ್ಳಾಲ ಪಟ್ಟಣದಲ್ಲಿ ಎಡಿಬಿ ನೆರವಿನ ಕುಡ್ಸೆಂಪ್ ಯೋಜನೆ ಅಡಿ ನಿರ್ಮಿಸಿರುವ ಕುಡಿಯುವ ನೀರು ಸರಬರಾಜು ಕಾಮಗಾರಿ ಪೂರ್ಣಗೊಂಡಿರುತ್ತದೆ. ಶುದ್ಧ ಕುಡಿಯುವ ನೀರು 2009ಮೇ ನಿಂದ ಸರಬರಾಜು ಮಾಡಲಾಗುತ್ತಿದೆ.

ಇದೀಗ ಸುಮಾರು 6076 ಮನೆಗಳಿಗೆ ನಲ್ಲಿ ನೀರಿನ ಸಂಪರ್ಕಕ್ಕಾಗಿ ಬಾಲ್‌ವಾಲ್ವ್‌ಗಳನ್ನು ಅಳವಡಿಸುವ ಕಾಮಗಾರಿಯು ಕೂಡ ಮುಗಿದಿದ್ದು, ಪುರಸಭೆಯವತಿಯಿಂದ ಇದುವರೆಗೆ 702 ಮನೆಗಳಿಗೆ ನಲ್ಲಿ ನೀರಿನ ಸಂಪರ್ಕವನ್ನು ಕಲ್ಪಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17ನ್ನು ಮಂಗಳೂರು ನಂತೂರು ವೃತ್ತದಿಂದ ತಲಪಾಡಿಯವರೆಗೆ ಚತುಷ್ಪಥಗೊಳಿಸಲು ಅದಕ್ಕೆ ಹೊಸದಾಗಿ ನಿರ್ಮಿಸಲಿರುವ ಹೆದ್ದಾರಿ ಸೇತುವೆಯ ಬುನಾದಿಯ ಸಲುವಾಗಿ ಪೂರ್ವಭಾವಿಯಾಗಿ ಅನ್ವೇಷಣಾ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಪ್ರಾಯೋಗಿಕ ರಂಧ್ರ ಕೊರೆಯುವ ಯಂತ್ರದಿಂದ ಹೆಚ್.ಡಿ.ಪಿ.ಇ. ಪೈಪು ಹಾನಿಗೊಳಗಾಗಿದೆ. ಆದ್ದರಿಂದ ನೇತ್ರಾವತಿ ನದಿಯ ನೀರಿಗೆ ಅಳವಡಿಸಿರುವ ಕೊಳವೆಗಳಲ್ಲಿ ನೀರು ಸೋರುವಿಕೆ ಉಂಟಾಗಿರುತ್ತದೆ.

ಈಗ ಅದೇ ಹೆದ್ದಾರಿಯ ಪ್ರಾಧಿಕಾರದವರು ಹೆದ್ದಾರಿಗೆ ಹೊಸ ಸೇತುವೆಯ ನಿರ್ಮಾಣ ಕಾಮಗಾರಿ ಪ್ರಾರಂಭಿಸಿ ಕೆಲಸ ಪ್ರಗತಿಯಲ್ಲಿರುವುದರಿಂದ ಅವರ ಯಂತ್ರಗಳು ಕಾಮಗಾರಿಯಲ್ಲಿ ತೊಡಗಿರುವುದರಿಂದ ದಿನಾಂಕ 20.01.2011ರಂದು ಪುನಃ ಒಂದು ಕೊಳವೆ ಹಾನಿಗೊಂಡಿರುವ ಸಂಭವ ಹೆಚ್ಚಾಗಿರುವುದರಿಂದ ಅದಕ್ಕೆ ಅವರೇ ಹೊಣೆಗಾರರಾಗುತ್ತಾರೆ. ಆದ್ದರಿಂದ ಯಾವುದೇ ಕಳಪೆ ಕಾಮಗಾರಿ ನಡೆದಿರುವುದಿಲ್ಲ ಹಾಗಾಗಿ ಯಾರ ಮೇಲು ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಕಾಮಗಾರಿಯನ್ನು ಉಳ್ಳಾಲ ಪುರಸಭೆಗೆ ಹಸ್ತಾಂತರಿಸಲಾಗಿದೆ. ಪುರಸಭೆಯ ವತಿಯಿಂದ ಹಾನಿಗೊಳಗಾಗಿರುವ ಕೊಳವೆಗಳನ್ನು ದುರಸ್ಥಿಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

ಶೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ಸಂಪೂರ್ಣವಾದ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಅವರಿಗೆ ಸಮಸ್ಯೆ ಇದ್ದುದರಿಂದ ನಾವು ಇಲ್ಲಿ ಬಂದು complaint ಮಾಡಿದ್ದೇವೆ. ಅವರ ಮಾತನ್ನು ಕೇಳಿ ನಮಗೆ ಉತ್ತರ ಕೊಡುವುದಾದರೆ, ಇಲ್ಲಿ ನಾವು ಗಮನ ಸೆಳೆಯುವ ಅಗತ್ಯವೇನೆಂದು ನನಗೆ ಅರ್ಥವಾಗುವುದಿಲ್ಲ. ಅಲ್ಲಿ ಯಾವುದೂ ಕೂಡ ಇನ್ನೂ ಕೂಡ ಉಳ್ಳಾಳ ಪುರಸಭೆಗೆ ಹ್ಯಾಂಡ್ ಓವರ್ ಆಗಿಲ್ಲ. ಬರೀ ಟ್ರಯಲ್ ಬೇಸಿಸ್‌ನಲ್ಲಿ ಇವತ್ತು ನೀರು ಬರುತ್ತಿದೆ. ನೇತ್ರವಾತಿ ನದಿ ನೀರು ಕೂಡ ಸೋರಿಕೆ ಆಗುತ್ತಿದೆ. ನೇತ್ರಾವತಿ ನದಿಯಲ್ಲಿ ಅಡಿಯಲ್ಲಿರುವ ಪೈಪನ್ನು ಸರಿಪಡಿಸುವುದಕ್ಕೆ ಪುರಸಭೆಯಲ್ಲಿ ಅಂತಹ ತಜ್ಞರೂ ಯಾರೂ ಕೂಡ ಇಲ್ಲ. ನೀರಿನ ಅಡಿಯಲ್ಲಿ ಹೋಗಿ ಅದನ್ನು ಸರಿಪಡಿಸುವ ಕೆಲಸ ಇವರೇ ಮಾಡಬೇಕು. ಎರಡು ದಿವಸ ಮುಂಚೆ ನಾನು ಕಾಮಗಾರಿಯನ್ನು ರಿವ್ಯೂ ಮಾಡಿದ್ದೇನೆ ಅಲ್ಲಿಯ ಇಂಜಿನಿಯರ್ ಬಂದಿದ್ದರು, ನಮ್ಮ ಕೆಲಸ ಆಗಲಿಲ್ಲ, ನಾವು ಹಂತ ಹಂತವಾಗಿ ಜೋನ್‌ವೈಸ್ ಪೂರ್ತಿ ಮಾಡಿಕೊಡುತ್ತೇವೆಂದು ಅವರು ಒಪ್ಪಿದ್ದಾರೆ. ಇಲ್ಲಿ ನಮಗೆ ಈ ಉತ್ತರ ಸಿಗುತ್ತದೆ. ಹೀಗೇ ಆದರೆ ನಾವು ಗಮನ ಸೆಳೆಯುವ ಅಗತ್ಯವೇನೆಂದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಚಿವರಲ್ಲಿ ನಮ್ಮ ಕಳಕಳಿಯ ವಿನಂತಿ, ಸಂಪೂರ್ಣವಾದ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ನೀವು ನೀರು ನಂತರ ಕೊಡಿ, ಮೊದಲು ಯಾರು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ ಅವರಿಗೆ ನೀರು ಕುಡಿಸುವಂತಹ ಕೆಲಸ ಮಾಡಿ. ಅವರ ಮೇಲೆ ಕಮ ತೆಗೆದುಕೊಳ್ಳುವಂತಹ ಕೆಲಸ ಮಾಡಿ. ತಪ್ಪು ಮಾಹಿತಿ ಕೊಟ್ಟರೆ ಯಾರನ್ನೂ ಕೂಡ ಕ್ಷಮಿಸುವುದು ಬೇಡ. ನಮ್ಮ ಕಷ್ಟ ತಂದು ನಾವು ಇಲ್ಲಿ ನಿವೇದನೆ ಮಾಡಿದರೆ, ಅಲ್ಲಿ ಇಂಜಿನಿಯರ್ ನಾವು ಹ್ಯಾಂಡ್ ಓವರ್ ಮಾಡಿಲ್ಲವೆಂದು ಹೇಳುತ್ತಾರೆ. ನಾವು ಇಲ್ಲಿ ಬಂದು ಸರ್ಕಾರಕ್ಕೆ ಅಧಿಕೃತವಾಗಿ ಕೇಳಿದರೆ ನಾವು ಹ್ಯಾಂಡ್ ಓವರ್ ಮಾಡಿದ್ದೇವೆಂದು ಉತ್ತರ ಕೊಡುತ್ತಾರೆ. ಇದನ್ನು ತೆಗೆದುಕೊಂಡು ಹೋಗಿ ನಾನು ನಮ್ಮ ಕ್ಷೇತ್ರದ ಪುರಸಭೆಯಲ್ಲಿ ಯಾವ ತರಹ ಮಾತನಾಡುವುದು ಹೇಳಿ. ಆದಕಾರಣ ಈ ಉತ್ತರವನ್ನು ತಾವು ತಿರಸ್ಕರಿಸಬೇಕು. ಯಾರಾದರೂ ನಿಮ್ಮ ಒಬ್ಬ ಅಧಿಕಾರಿಯನ್ನು ಪುರಸಭೆಗೆ ಕಳುಹಿಸಿ ಅಲ್ಲಿ ಕೆಲಸ ಸರಿಯಾಗಿ ಆಗಿದೆಯೇ, ಇಲ್ಲವೇ ಎಂಬ ಬಗ್ಗೆ ಪರಿಶೀಲಿಸಬೇಕೆಂದು ಮಾನ್ಯ

ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಹಿರಿಯ ಅಧಿಕಾರಿಗಳಿಂದ ನಿಷ್ಪಕ್ಷಪಾತವಾದ ತನಿಖೆ ನಡೆಸಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ವಿಷಯವನ್ನು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ. ನಾವು ಅಧಿಕಾರಿಗಳಿಂದ ತೆಗೆದುಕೊಂಡಂತಹ ಮಾಹಿತಿ ಪ್ರಕಾರ ಉತ್ತರ ಕೊಟ್ಟಿದ್ದೇವೆ. ಅವರು ಅದು ಸರಿಯಿಲ್ಲವೆನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಹಿರಿಯ ಅಧಿಕಾರಿಗಳ ಮುಖಾಂತರ ಅದರ ಬಗ್ಗೆ ಇನ್ನಷ್ಟು ತನಿಖೆ ಮಾಡಿಕೊಂಡು ಹೆಚ್ಚಿನ ವರದಿ ತರಿಸಿ ಮುಂದಿನ ಕ್ರಮ ನಾವು ತೆಗೆದುಕೊಳ್ಳುತ್ತೇವೆ.

ಆ) ವಿಷಯ: ಮೈಸೂರು ಪೇಪರ್ ಮಿಲ್ಸ್ ನೌಕರರ ನ್ಯಾಯಯುತ ಬೇಡಿಕೆ ಈಡೇರಿಸುವ ಬಗ್ಗೆ

ಶ್ರೀ ಬಿ.ಕೆ. ಸಂಗಮೇಶ್ವರ ಹಾಗೂ ಕಿಮ್ಮನೆ ರತ್ನಾಕರ್(ಭದ್ರಾವತಿ, ತೀರ್ಥಹಳ್ಳಿ): ಭದ್ರಾವತಿ ಮೈಸೂರು ಪೇಪರ್ ಮಿಲ್ಸ್ ಕಾರ್ಖಾನೆಯ ನೌಕರರಿಗೆ ತುಟ್ಟಿಭತ್ಯೆ ನೀಡುವ ಹಾಗೂ ನ್ಯಾಯಯುತ ಬೇಡಿಕೆಗಳ ಈಡೇರಿಸುವ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಸರ್ಕಾರವು ಘೋಷಿಸಿರುವ ಶೇ. 10.25ರ ಹೆಚ್ಚುವರಿ ತುಟ್ಟಿ ಭತ್ಯೆಯನ್ನು ದಿನಾಂಕ 01.07.2010ರಿಂದ ಕೊಡಬೇಕೆಂದು ಎಂಪಿಎಂ ನೌಕರರ ಸಂಘವು ಒತ್ತಾಯಿಸುತ್ತಿದ್ದು ಇದರ ಮೊತ್ತವು ಮಾಹೆಯಾನ ರೂ. 36.00 ಲಕ್ಷದಷ್ಟಾಗುತ್ತದೆ. ಈ ನಿಟ್ಟಿನಲ್ಲಿ ದಿ: 1.7.2010ರಿಂದ 31.01.2011ರವರೆಗಿನ ಒಟ್ಟು ಬಾಕಿ ತುಟ್ಟಿ ಭತ್ಯೆಯು ರೂ. 288.00 ಲಕ್ಷ ಆಗಿದೆ. ದಿನಾಂಕ 1.1.2011ರಿಂದ ತುಟ್ಟಿಭತ್ಯೆಯ ಮತ್ತೊಂದು ಕಂತು ಹೆಚ್ಚಿಸಲ್ಪಡುವ ನಿರೀಕ್ಷೆ ಇದೆ. ಕಂಪನಿಯ ಹದಗೆಟ್ಟಿರುವ ಆರ್ಥಿಕ ಸ್ಥಿತಿಯ ಕಾರಣವಾಗಿ ಕಂಪನಿಯು ಈ ಹಣವನ್ನು ನೌಕರರಿಗೆ ಕೊಟ್ಟಿಲ್ಲ.

ಸರ್ಕಾರದ ದಿನಾಂಕ 25.8.1994ರ ಸುತ್ತೋಲೆಯಂತೆ ಕಂಪನಿಯು ತುಟ್ಟಿ ಭತ್ಯೆಯ ಬಿಡುಗಡೆಗಾಗಿ ಸರ್ಕಾರವನ್ನು ಕೋರಿದ್ದು, ಸರ್ಕಾರವು ತನ್ನ ದಿನಾಂಕ 14.2.2011ರ ಪತ್ರದಂತೆ ಈ ಪ್ರಸ್ತಾಪವನ್ನು, ಕಂಪನಿಯ ಪ್ರಸ್ತುತ ಹಣಕಾಸಿನ ಪರಿಸ್ಥಿತಿಯನ್ನು ಪರಿಗಣಿಸಿ, ತಿರಸ್ಕರಿಸಿದೆ.

ಪ್ರಸ್ತುತ ಕಂಪನಿಯು ಅದರ ಬೆಳೆಯುತ್ತಿರುವ ನಷ್ಟದ (ಇದು ದಿ: 31.3.2011ರ ವೇಳೆಗೆ ಕಂಪನಿಯ ನಿವ್ವಳ ಆಸ್ತಿ ರೂ. 118.00 ಕೋಟಿಗಳ